ವಿಷಯ: ಗ ಪಾಲರು

ಪತ್ರಿಕೆಯ ಹೆಸರು: ಪ್ರಜಾವಾಣಿ

ದಿನಾಂಕ 05/03/2020

ದೊರೆಸ್ವಾಮಿ ಟೀಕಿಸಿದ ಶಾಸಕ ಯತ್ನಾಳ್ ವಿರುದ್ಧ ಕ್ರಮಕ್ಕೆ ಮನವಿ • ಬಜೆಟ್ ಚರ್ಚೆಯಲ್ಲಿ ಭಾಗವಹಿಸಲು ನಿರ್ಧಾರ: ಸಿದ್ದರಾಮಯ್ಯ

# ರಾಜ್ಯಪಾಲರಿಗೆ ದೂರು: ಕಾಂಗ್ರೆಸ್ ಧರಣಿ ಅಂತ್ಯ

5-3-2020

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ವಿರುದ್ಧ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ನೀಡಿರುವ ಹೇಳಿಕೆ ಹಿನ್ನೆಲೆಯಲ್ಲಿ ಕಳೆದ ಎರಡು ದಿನಗಳಿಂದ ವಿಧಾನಮಂಡಲದ ಉಭಯ ಸದನಗಳಲ್ಲಿ ನಡೆಸಿದ್ದ ಧರಣಿಯನ್ನು ಕಾಂಗ್ರೆಸ್ ಬುಧವಾರ ಹಿಂದಕ್ಕೆ ಪಡೆದಿದೆ.

ರಾಜ್ಯಪಾಲ ವಜುಭಾಯಿ ವಾಲಾ ಅವರನ್ನು ಬುಧವಾರ ಬೆಳಿಗ್ಗೆ ಭೇಟಿ ಮಾಡಿದ ಕಾಂಗ್ರೆಸ್ ಸದಸ್ಯರು, ಯತ್ನಾಳ್ ವಿರುದ್ಧ ಲಿಖಿತ ದೂರು ನೀಡಿದರು. ಬಳಿಕ ವಿಧಾನಸಭೆಯಲ್ಲಿ ಹೇಳಿಕೆ ನೀಡಿದ ಸಿದ್ದರಾಮಯ್ಯ, 'ದೊರೆಸ್ವಾಮಿಯವರ ವಿರುದ್ಧ ಯತ್ನಾಳ್ ಅವಹೇಳನಕಾರಿ ಹೇಳಿಕೆ ನೀಡಿದ್ದು, ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲು ಸಭಾಧ್ಯಕ್ಷರಿಗೆ ಸೂಚನೆ ನೀಡುವಂತೆ ಮನವಿ ಮಾಡಿದ್ದೇವೆ' ಎಂದರು.

'ಸದನದಲ್ಲಿ ನಾವು ಚರ್ಚೆಗೆ ನೋಟಿಸ್ ನೀಡಿದರೂ, ನೀವು ಅವಕಾಶ ನೀಡಲಿಲ್ಲ. ವಿಧಿ ಇಲ್ಲದೇ ರಾಜ್ಯಪಾಲರ ಬಳಿಗೆ ಹೋಗ ಬೇಕಾಯಿತು. ಗುರುವಾರ ಬಜೆಟ್ ಇದ್ದು, ರಾಜ್ಯದ ಹಲವು ಜ್ವಲಂತ ವಿಷಯಗಳು ಮತ್ತು ಮಸೂದೆಗಳ ಕುರಿತ ಚರ್ಚೆಗಳಲ್ಲಿ ಭಾಗವಹಿಸಲು ಧರಣಿ ಕೈಬಿಡುತ್ತಿದ್ದೇವೆ' ಎಂದು ಸಿದ್ದರಾಮಯ್ಯ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಭಾಧ್ಯಕ್ಷ ವಿಶ್ವೇಶ್ವರಹೆಗಡೆಕಾಗೇರಿ, 'ಪ್ರಜಾಪ್ರಭುತ್ವದಲ್ಲಿ ಭಿನ್ನ ಅಭಿಪ್ರಾಯಗಳು ಇದ್ದೇ ಇರುತ್ತವೆ. ಸದನದಲ್ಲಿ ಎಂತಹ ಮತಭೇದ ಉದ್ಭವಿಸಿದರೂ ತಾರ್ಕಿಕ ಅಂತ್ಯ ಹಾಡಬೇಕು. ಧರಣಿ ಕೊನೆಗೊಳಿಸಿ, ಕಲಾಪದಲ್ಲಿ ಭಾಗವಹಿಸಿದ್ದು ನನಗೆ ಸಂತೋಷವಾಗಿದೆ' ಎಂದರು.

**ಕ್ಷಮೆಗೆ ಬಿಜೆಪಿ ಆಗ್ರಹ:** 'ಸಭಾಧ್ಯಕ್ಷರ ರೂಲಿಂಗ್ ಪ್ರಶ್ನಿಸಿ ಕಾಂಗ್ರೆಸ್ ಸದಸ್ಯರು ರಾಜ್ಯಪಾಲರಿಗೆ ದೂರು ನೀಡಲು ಹೋಗಿದ್ದು ಸರಿಯಲ್ಲ. ಅದಕ್ಕಾಗಿ ಸಭಾಧ್ಯಕ್ಷರ ಕ್ಷಮೆ ಕೇಳಬೇಕು' ಎಂದು ಬಿಜೆಪಿಯ ಕೆ.ಜಿ.ಬೋಪಯ್ಯ ಪಟ್ಟು ಹಿಡಿದರು. ಇದಕ್ಕೆ ಅರಗ ಜ್ಞಾನೇಂದ್ರ ಧ್ವನಿಗೂಡಿಸಿದರು.

ಗೃಹ ಸಚಿವ ಬಸವರಾಜ ಬೊಮ್ಮಾಯಿ ಮಾತನಾಡಿ, 'ಸಭಾಧ್ಯಕ್ಷರಿಗೆ ಈ ಮನೆಯಲ್ಲಿ ಪರಮಾಧಿಕಾರ ಇದೆ. ಅವರ ರೂಲಿಂಗ್ ಅಂತಿಮ. ಅದನ್ನು ಪ್ರಶ್ನಿಸುವ ಮೂಲಕ ಎರಡು ಸಾಂವಿಧಾನಿಕ ಸಂಸ್ಥೆಗಳ ಮುಖ್ಯಸ್ಥರ ಮಧ್ಯೆ ಸಂಘರ್ಷ ತರುವ ಪ್ರಯತ್ನ ನಡೆಸಲಾಗಿದೆ' ಎಂದರು.



ಶಾಸಕ ಬಸನಗೌಡ ಪಾಟೀಲ ಯತ್ನಾಳ್ ವಿರುದ್ಧ ರಾಜ್ಯಪಾಲರಿಗೆ ದೂರು ಸಲ್ಲಿಸಿದ ಬಳಿಕ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿದರು. ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಎಸ್.ಆರ್.ಪಾಟೀಲ, ವಿ.ಎಸ್.ಉಗ್ರಪ್ಪ, ದಿನೇಶ್ ಗುಂಡೂರಾವ್, ಈಶ್ವರ ಖಂಡ್ರೆ ಮತ್ತಿತರರು ಇದ್ದರು.

## ರವಿಕುಮಾರ್ ಪ್ರಕರಣ ನೀತಿ ನಿರೂಪಣಾ ಸಮಿತಿಗೆ?

ಬೆಂಗಳೂರು: ವಿಧಾನ ಪರಿಷತ್‌ನಲ್ಲಿ ಎಚ್.ಎಸ್.ದೊರೆಸ್ವಾಮಿ ವಿರುದ್ಧ ಧಿಕ್ಕಾರ ಕೂಗಿದ ಬಿಜೆಪಿ ಸದಸ್ಯ ಎನ್.ರವಿಕುಮಾರ್ ವಿರುದ್ಧ ಕ್ರಮಕೈಗೊಳ್ಳುವ ವಿಷಯವನ್ನು ನೀತಿ ನಿರೂಪಣಾ ಸಮಿತಿಗೆ ನೀಡುವ ಬಗ್ಗೆ ಪರಿಶೀಲಿಸುವುದಾಗಿ ಸಭಾಪತಿ ಭರವಸೆ ನೀಡಿದ ಮೇರೆಗೆ ವಿರೋಧ ಪಕ್ಷಗಳು ಪ್ರತಿಭಟನೆ ಹಿಂಪಡೆದುಕೊಂಡವು.

ಬುಧವಾರ ಕಲಾಪ ಆರಂಭವಾಗುತ್ತಿದ್ದಂತೆಯೇ ವಿರೋಧ ಪಕ್ಷಗಳ ಸದಸ್ಯರು ಸಭಾಪತಿ ಪೀಠದ ಮುಂಭಾಗ ಪ್ರತಿಭಟನೆ ಮುಂದುವರಿಸಿದರು. ಸ್ಪಷ್ಟೀಕರಣ ಕೊಡಲು ರವಿಕುಮಾರ್‌ಗೆ ಅವಕಾಶ ಕೊಡಲಾಯಿತು.

'ಸ್ವಾತಂತ್ರ್ಯ ಹೋರಾಟಗಾರ ಸಾವರ್ಕರ್ ಅವರನ್ನು ಹೇಡಿ ಎಂದು ಕರೆದ ದೊರೆಸ್ವಾಮಿ ಅವರ ವಿಚಾರದಲ್ಲಿ ಕ್ಷಮೆ ಕೇಳುವ ಪ್ರಶ್ನೆಯೇ ಇಲ್ಲ' ಎಂದು ರವಿಕುಮಾರ್ ಸ್ಪಷ್ಟಪಡಿಸಿದರು.

ವಿಷಾದ ಸೂಚಿಸುವ ಬದಲಿಗೆ ಭಾಷಣ ಮಾಡಲು ಮುಂದಾದ ರವಿಕುಮಾರ್ ವಿರುದ್ಧ ವಿರೋಧ ಪಕ್ಷದ ಸದಸ್ಯರು ಧಿಕ್ಕಾರ ಕೂಗಿದರು. 15 ನಿಮಿಷ ಮಾತಿಗೆ ಅವಕಾಶ ಕೇಳಿದ ಅವರ ಮಾತನ್ನು ಪೂರ್ತಿ ಕೇಳಬೇಕು ಎಂದು ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ ಮನವಿ ಮಾಡಿದರು. ಆದರೆ ಇದಕ್ಕೆ ಸದಸ್ಯರು ಒಪ್ಪಲಿಲ್ಲ.

ವಿರೋಧ ಪಕ್ಷದ ನಾಯಕ ಎಸ್.ಆರ್.ಪಾಟೀಲ ಅವರು, ನಿಯಮ 242 ಬಿ ಅಡಿಯಲ್ಲಿ ನೀತಿ ನಿರೂಪಣಾ ಸಮಿತಿಗೆ ಈ ವಿಷಯ ವಹಿಸುವಂತೆ ತಾವು ಅರ್ಜಿ ಸಲ್ಲಿಸಿದ್ದಾಗಿ ತಿಳಿಸಿದರು. ಅದಕ್ಕೆ ಸಮ್ಮತಿ ಸೂಚಿಸಿದ ಸಭಾಪತಿ ಕೆ.ಪ್ರತಾಪಚಂದ್ರ ಶೆಟ್ಟಿ, ಇದು ಸಮಿತಿಗೆ ವಹಿಸುವ ಸೂಕ್ತ ಪ್ರಕರಣವೇ ಎಂಬುದನ್ನು ಪರಿಶೀಲಿಸಿದ ಬಳಿಕ ನಿರ್ಧಾರಕ್ಕೆ ಬರುವುದಾಗಿ ಹೇಳಿದ ಬಳಿಕ ವಿರೋಧ ಪಕ್ಷದ ಸದಸ್ಯರು ಧರಣಿ ಕೈಬಿಟ್ಟರು.



ಬಿಜೆಪಿ ಸದಸ್ಯ ರವಿಕುಮಾರ್ ಅವರು ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿ ವಿಧಾನ ಪರಿಷತ್‌ನಲ್ಲಿ ಬುಧವಾರ ವಿರೋಧ ಪಕ್ಷದ ಸದಸ್ಯರು ಧರಣಿ ನಡೆಸಿದರು —ಪ್ರಜಾವಾಣಿ ಚಿತ್ರ